


بسم اللہِ الرّحمٰن الرّحیم

# ಹುನೈನ್ ಯುದ್ಧದ ನಂತರದ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **03–10–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹುನೈನ್ ಯುದ್ಧದ ನಂತರ ಅದರಲ್ಲಿ ಗಳಿಸಿದ ಯುದ್ಧಸಂಪತ್ತು ಮತ್ತು ಅದರ ವಿತರಣೆಯ ಬಗ್ಗೆ ಪ್ರಸ್ತಾಪಿಸಲಾಗುತ್ತಿತ್ತು. ಈ ಬಗ್ಗೆ ಮತ್ತಷ್ಟು ಘಟನೆಗಳು ಈ ರೀತಿ ವರದಿಯಾಗಿವೆ:

ಹಝ್ರತ್ ಪೈಗಂಬರ್(ಸ) ಎಲ್ಲ ಸಂಪತ್ತನ್ನು ಜಅರಾನಾ ಎಂಬ ಸ್ಥಳದಲ್ಲಿ ಸಂಗ್ರಹಿಸಲು ಆದೇಶಿಸಿ, ನಂತರ ತಾಯಿಫ್‌ನ ಕಡೆಗೆ ಪ್ರಯಾಣ ಬೆಳೆಸಿದರು. ಸುಮಾರು ಒಂದು ತಿಂಗಳ ನಂತರ ತಾಯಿಫ್‌ನಿಂದ ಜಅರಾನಾಗೆ ಮರಳಿದರು. ಅಲ್ಲಿಗೆ ತಲುಪಿದ ನಂತರವೂ ಅವರು ಯುದ್ಧಸಂಪತ್ತನ್ನು ತಕ್ಷಣವೇ ವಿತರಿಸಲಿಲ್ಲ. ಬಹುಶಃ ಬನೂ ಹವಾಝಿನ್ ಗೋತ್ರದವರು ಪಶ್ಚಾತ್ತಾಪಪಟ್ಟು ಹಿಂದಿರುಗಬಹುದು ಎಂಬ ಪ್ರತೀಕ್ಷೆಯಿಂದ ಇನ್ನೂ ಕೆಲವು ದಿನಗಳ ಕಾಲ ಕಾಯ್ದರು. ಒಂದೆಡೆ ಅವರಿಗಾಗಿ ಹಝ್ರತ್ ಪೈಗಂಬರ್(ಸ) ಕಾಯುತ್ತಿದ್ದರು, ಮತ್ತೊಂದೆಡೆ ಹಝ್ರತ್ ಪೈಗಂಬರ್(ಸ)ರ ಬಳಿ ಹೋಗುವುದು ಪ್ರಯೋಜನಕಾರಿಯಾಗುವುದೋ ಇಲ್ಲವೋ ಎಂಬ ಗೊಂದಲದಲ್ಲಿ ಬನೂ ಹವಾಝಿನ್ ಗೋತ್ರದವರು ಇದ್ದರು.

ಸುಮಾರು 13–14 ದಿನಗಳ ಕಾಲ ಕಾದ ನಂತರ ಹಝ್ರತ್ ಪೈಗಂಬರ್(ಸ) ಯುದ್ಧಸಂಪತ್ತನ್ನು ವಿತರಿಸಿದರು. ಆಗ, ಈಗಾಗಲೇ ಇಸ್ಲಾಮನ್ನು ಸ್ವೀಕರಿಸಿದ್ದ ಬನೂ ಹವಾಝಿನಿನ ಹದಿನಾಲ್ಕು ಗೌರವಾನ್ವಿತ ವ್ಯಕ್ತಿಗಳು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಹೀಗೆ ಹೇಳಿದರು: 'ನಮ್ಮ ಪೂರ್ತಿ ಗೋತ್ರ ಇಸ್ಲಾಮನ್ನು ಸ್ವೀಕರಿಸಿಕೊಂಡಿದೆ.' ಈ ಜನರು ಹಝ್ರತ್ ಪೈಗಂಬರ್(ಸ)ರೊಡನೆ ಕರುಣೆಗಾಗಿ ಮನವಿ ಮಾಡಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: 'ನಾನು ಬಹಳ ದಿನಗಳ ತನಕ ನಿಮ್ಮನ್ನು ಕಾಯುತ್ತಿದ್ದೆ, ಆದರೆ ನೀವು ಬರದೇ ಇದ್ದ ಕಾರಣದಿಂದ ಯುದ್ಧಸಂಪತ್ತನ್ನು ವಿತರಿಸಿದೆ. ಈಗ ನೀವು ನೋಡುತ್ತಿರುವಂತೆ, ಸೆರೆಯಾಳುಗಳಲ್ಲಿ ಕೆಲವರು ಮಾತ್ರ ಉಳಿದಿದ್ದಾರೆ ಮತ್ತು ಉಳಿದವರೆಲ್ಲರೂ ಹಂಚಲ್ಪಟ್ಟಿದ್ದಾರೆ. ಆದ್ದರಿಂದ, ಈಗ ನೀವು ಸಂಪತ್ತು ಮತ್ತು ಸಾಮಗ್ರಿಗಳು ಅಥವಾ ಸೆರೆಯಾಳುಗಳಾದ ಪುರುಷರು ಮತ್ತು ಮಹಿಳೆಯರಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಬಹುದು.' ಸೆರೆಯಾಳುಗಳನ್ನು ಹಿಂದಿರುಗಿ ಪಡೆಯಲು ಬನೂ ಹವಾಝಿನ್ ಜನರು ನಿರ್ಣಯಿಸಿದರು. ತಕ್ಷಣವೇ, ಬನೂ ಅಬ್ದುಲ್ ಮುತ್ತಲಿಬ್‌ರ ಬಳಿ ಇದ್ದ ಸೆರೆಯಾಳುಗಳನ್ನು ಹಝ್ರತ್ ಪೈಗಂಬರ್(ಸ) ಹಿಂದಿರುಗಿಸಿದರು. ಉಳಿದ ಸೆರೆಯಾಳುಗಳ ಕುರಿತು ಹಝ್ರತ್ ಪೈಗಂಬರ್(ಸ) ಹೀಗೆ ಸಲಹೆ ನೀಡಿದರು: 'ನೀವು ಮುಸ್ಲಿಮರ ಮುಂದೆ ನಿಮ್ಮ ಇಸ್ಲಾಂ ಸ್ವೀಕಾರದ ಬಗ್ಗೆ ಹೇಳಿರಿ ಮತ್ತು ನನ್ನನ್ನು ನಿಮಗಾಗಿ ಶಿಫಾರಸು ಮಾಡುವವರನ್ನಾಗಿ ನಿಶ್ಚಯಿಸಿರಿ.' ಅದೇ ರೀತಿ ಮಾಡಲಾಯಿತು. ಹೀಗೆ ಹಝ್ರತ್ ಪೈಗಂಬರ್(ಸ)ರ ಅತುಲ್ಯವಾದ ಉದಾರತೆಯ ಕಾರಣದಿಂದಾಗಿ, ಬನೂ ಹವಾಝಿನಿನ ಎಲ್ಲ ಸೆರೆಯಾಳುಗಳು ಸುಗಮವಾಗಿ ಬಿಡುಗಡೆಯಾದರು.

ಬನೂ ಹವಾಝಿನಿನ ಈ ಸೆರೆಯಾಳುಗಳನ್ನು ಹಝ್ರತ್ ಪೈಗಂಬರ್(ಸ) ಯಾವುದೇ ಪರಿಹಾರಧನ ಪಡೆಯದೇ ಬಿಡುಗಡೆ ಮಾಡಿದ್ದರಲ್ಲದೆ, ಅವರಿಗೆ ಬಟ್ಟೆಗಳನ್ನೂ ನೀಡಿದರು ಮತ್ತು ಬಿಡುಗಡೆಯಾದವರಲ್ಲಿ ಯಾರೂ ಹೊಸ ಉಡುಪಿಲ್ಲದೆ ಹೋಗಬಾರದು ಎಂದು ತಾಕೀತು ಮಾಡಿದರು. ಈ ಆದೇಶವನ್ನು ಪಾಲಿಸಿ, ಪ್ರತಿಯೊಬ್ಬ ಸೆರೆಯಾಳಿಗೂ ಹೊಸ ಉಡುಪನ್ನು ನೀಡಲಾಯಿತು. ವರದಿಯ ಪ್ರಕಾರ, ಮೂವರು ವ್ಯಕ್ತಿಗಳು ತಮ್ಮ ಸೆರೆಯಾಳುಗಳನ್ನು ಹಿಂದಿರುಗಿಸಲು ನಿರಾಕರಿಸಿದರು. ಕೆಲವು ಇತರ ವರದಿಗಳ ಪ್ರಕಾರ, ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: 'ಬನೂ ಹವಾಝಿನಿನ ಎಲ್ಲ ಸೆರೆಯಾಳುಗಳು ಬಿಡುಗಡೆಯಾಗಿದ್ದಾರೆ ಮತ್ತು ಯಾರು ತಮ್ಮ ಸೆರೆಯಾಳನ್ನು ಬಿಡುಗಡೆ ಮಾಡಲು ಬಯಸುವುದಿಲ್ಲವೋ, ಅವರಿಗೆ ಅದಕ್ಕೆ ಬದಲಾಗಿ ಬೈತುಲ್ ಮಾಲ್‌ನಿಂದ ಆರು ಬಲಶಾಲಿ ಒಂಟೆಗಳನ್ನು ಪರಿಹಾರವಾಗಿ

ನೀಡಲಾಗುವುದು.' ಆಗ ತಮ್ಮ ಸೆರೆಯಾಳುಗಳನ್ನು ಬಿಟ್ಟುಕೊಡಲು ಸಿದ್ಧರಿಲ್ಲದವರು ಕೂಡ ಒಪ್ಪಿಕೊಂಡರು. ಹೀಗೆ ಬನೂ ಹವಾಝಿನಿನ ಆರು ಸಾವಿರ ಸೆರೆಯಾಳುಗಳು ಬಿಡುಗಡೆಯಾದರು.

ಕೆಲವು ವರದಿಗಳ ಪ್ರಕಾರ, ಉಯೈನ ಬಿನ್ ಹಿಸ್ನ್ ಫಝಾರೀ ಎಂಬವನು ಈ ಆದೇಶವನ್ನು ಪಾಲಿಸಲಿಲ್ಲ. ಇದರಿಂದಾಗಿ ಅವನಿಗೆ ತೀವ್ರ ಅಪಮಾನಕರವಾದ ಸ್ಥಿತಿ ಉಂಟಾಯಿತು ಮತ್ತು ಅವನು ಅನುಗ್ರಹದಿಂದಲೂ ವಂಚಿತನಾದನು. ಉಯೈನ ಹೊರತುಪಡಿಸಿ ಎಲ್ಲರೂ ತಮ್ಮ ಸೆರೆಯಾಳುಗಳನ್ನು ಹಿಂದಿರುಗಿಸಿದ್ದಾರೆ ಎಂದು ಹಝ್ರತ್ ಪೈಗಂಬರ್(ಸ)ರಿಗೆ ತಿಳಿಸಿದಾಗ, 'ಅಲ್ಲಾಹನು ಅವನನ್ನು ನಷ್ಟದಲ್ಲಿ ಇರಿಸಲಿ' ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಉಯೈನನ ಸೆರೆಯಾಳಿನ ಘಟನೆಯು ಹೀಗಿದೆ: ಅವನು ಒಂದು ಯುವತಿಯ ಬದಲಾಗಿ ಒಬ್ಬ ವೃದ್ಧ ಮಹಿಳೆಯನ್ನು ಸೆರೆಯಾಳಾಗಿ ಪಡೆದುಕೊಂಡಿದ್ದನು, ಏಕೆಂದರೆ ಆಕೆಗೆ ಅನೇಕ ಮಕ್ಕಳು ಇರುವುದರಿಂದ ತನಗೆ ಹೆಚ್ಚು ವಿಮೋಚನಾ ಶುಲ್ಕ ಸಿಗಬಹುದು ಎಂದು ಅವನು ಆಶಿಸಿದ್ದನು. ಆ ವೃದ್ಧ ಮಹಿಳೆಯ ಮಗ ಉಯೈನನ ಬಳಿಗೆ ಬಂದು, ನೂರು ಒಂಟೆಗಳಿಗೆ ಬದಲಾಗಿ ಆಕೆಯನ್ನು ಬಿಡುಗಡೆ ಮಾಡಲು ಮುಂದಾದನು. ಉಯೈನ ಇನ್ನಷ್ಟು ಲಾಭದ ಆಸೆಯಲ್ಲಿ ಆಕೆಯನ್ನು ಬಿಡುಗಡೆ ಮಾಡಲು ನಿರಾಕರಿಸಿದನು. ಸ್ವಲ್ಪ ಸಮಯದ ನಂತರ, ಉಯೈನ ಸ್ವತಃ ಆ ಮಗನ ಬಳಿಗೆ ಹೋಗಿ, 'ನೀನು ನೀಡುತ್ತಿದ್ದ ಒಂಟೆಗಳನ್ನು ಈಗ ಕೊಡುತ್ತೀಯಾ?' ಎಂದು ಕೇಳಿದನು. ಅದಕ್ಕೆ ಆ ಯುವಕ, 'ಈಗ ನಾನು ಕೇವಲ ಐವತ್ತು ಒಂಟೆಗಳನ್ನು ಕೊಡುತ್ತೇನೆ' ಎಂದನು. ಹೀಗೆ, ಉಯೈನ ಇನ್ನಷ್ಟು ಕೇಳುತ್ತಿದ್ದಾಗ ಅದೂ ಕೂಡ ಕೊಡುವುದಿಲ್ಲವೆಂದು ಅವನು ಹೇಳುತ್ತಿದ್ದನು. ಬೇಡಿಕೆ ಕಡಿಮೆಯಾಗುತ್ತಾ ಹೋಗಿ ಕೊನೆಗೆ ಉಯೈನ ಹೇಳಿದನು: 'ಈ ವೃದ್ಧೆಯನ್ನು ಉಚಿತವಾಗಿ ತೆಗೆದುಕೊಂಡು ಹೋಗು.' ಆಗ ಆ ಯುವಕ ಹೇಳಿದನು: 'ರಸೂಲುಲ್ಲಾಹ್(ಸ) ಪ್ರತಿ ಸೆರೆಯಾಳಿಗೂ ಬಿಡುಗಡೆ ಜೊತೆಗೆ ಬಟ್ಟೆಯನ್ನೂ ನೀಡಿದ್ದಾರೆ, ಆದರೆ ಈ ವೃದ್ಧ ಮಹಿಳೆ ಅದರಿಂದ ವಂಚಿತಳಾಗಿದ್ದಾಳೆ, ಆದ್ದರಿಂದ ನೀನು ಆಕೆಗೆ ಬಟ್ಟೆಯನ್ನೂ ಕೊಡು.' ಅಂತಿಮವಾಗಿ, ಉಯೈನ ತನ್ನದೇ ಹೊದಿಕೆಯನ್ನು ನೀಡಬೇಕಾಯಿತು. ಹೀಗೆ ಆ ಯುವಕ ಆ ಸೆರೆಯಾಳು ಮಹಿಳೆ ಮತ್ತು ಬಟ್ಟೆ ಎರಡನ್ನೂ ತೆಗೆದುಕೊಂಡು ಹೋದನು.

ಹಝ್ರತ್ ಪೈಗಂಬರ್(ಸ) ಬನೂ ಹವಾಝಿನಿನ ನಾಯಕ ಮಾಲಿಕ್ ಬಿನ್ ಔಫ್‌ನ ಬಗ್ಗೆ ವಿಚಾರಿಸಿದರು, ಆಗ ಅವನು ತಾಯಿಫ್‌ನಲ್ಲಿ ಬನೂ ಸಕೀಫ್‌ರ ಬಳಿ ಇದ್ದಾನೆ ಎಂದು ತಿಳಿದುಬಂತು. ಹಝ್ರತ್ ಪೈಗಂಬರ್(ಸ) ಅವನಿಗೆ ಸಂದೇಶ ಕಳುಹಿಸಿ, ಅವನು ತಮ್ಮ ವಿಧೇಯತೆಯನ್ನು ಒಪ್ಪಿಕೊಂಡು ಬಂದರೆ, ಅವನ ಕುಟುಂಬ ಸದಸ್ಯರನ್ನು ಹಿಂದಿರುಗಿಸಲಾಗುವುದು ಎಂದು ತಿಳಿಸಿದರು. ಮಾಲಿಕ್ ಬಿನ್ ಔಫ್ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದಾಗ, ಹಝ್ರತ್ ಪೈಗಂಬರ್(ಸ) ಆತನ ಕುಟುಂಬದವರನ್ನು ಹಿಂದಿರುಗಿಸಿದರು. ಮಾತ್ರವಲ್ಲ, ಒಂದು ನೂರು ಒಂಟೆಗಳನ್ನು ಕೂಡ ಉಡುಗೊರೆಯಾಗಿ ನೀಡಿದರು. ಹಝ್ರತ್ ಪೈಗಂಬರ್(ಸ)ರ ಈ ಉದಾರತೆಯನ್ನು ಕಂಡು ಮಾಲಿಕ್ ಮುಸ್ಲಿಂ ಆದನು.

ಬನೂ ಹವಾಝಿನಿನ ಸೆರೆಯಾಳುಗಳಲ್ಲಿ ಶೈಮಾ ಎಂಬ ಓರ್ವ ಮಹಿಳೆಯೂ ಇದ್ದಳು, ಅವಳ ನಿಜವಾದ ಹೆಸರು ಹುಝಾಫಾ ಎಂದಾಗಿತ್ತು. ಅವಳನ್ನು ಬಂಧಿಸಿದಾಗ, 'ನಾನು ನಿಮ್ಮ ಪ್ರವಾದಿಯ ಮಲಸಹೋದರಿ' ಎಂದು ಅವಳು ಹೇಳಿದಳು. ಆಗ ಅವಳನ್ನು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರುಪಡಿಸಲಾಯಿತು. ಆಕೆ ಹಝ್ರತ್ ಪೈಗಂಬರ್(ಸ)ರಿಗೆ ತಮ್ಮ ಹಾಲುಕುಡಿದ ಸಂಬಂಧದ ಗುರುತಾಗಿ ಹಲ್ಲಿನ ಗುರುತನ್ನು ತೋರಿಸಿದಳು ಮತ್ತು ಹೀಗೆ ಹೇಳಿದಳು: 'ತಾವು ನನ್ನ ಮಡಿಲಲ್ಲಿ ಇದ್ದಾಗ ನನ್ನನ್ನು ಕಚ್ಚಿದ ಗುರುತು ಇದು. ನಾವು ಆ ಕಾಲದಲ್ಲಿ ಕುರಿಗಳನ್ನು ಮೇಯಿಸುತ್ತಿದ್ದೆವು. ತಮ್ಮ ಸಾಕುತಾಯಿ ಮತ್ತು ಸಾಕು ತಂದೆ ನನ್ನ ನಿಜವಾದ ತಾಯಿ–ತಂದೆ ಆಗಿದ್ದಾರೆ.' ಹಝ್ರತ್ ಪೈಗಂಬರ್(ಸ) ಇದನ್ನು ಕೇಳಿದಾಗ ಎದ್ದುನಿಂತರು ಮತ್ತು ಆಕೆಗಾಗಿ ತಮ್ಮ ಚಾದರವನ್ನು ಹಾಸಿದರು ಹಾಗೂ ಅದರ ಮೇಲೆ ಕುಳಿತುಕೊಳ್ಳಲು ಹೇಳಿದರು. ಹಝ್ರತ್ ಪೈಗಂಬರ್(ಸ)ರ ಕಣ್ಣುಗಳಿಂದ ಕಣ್ಣೀರು ಹರಿಯಲಾರಂಭಿಸಿತು. ತಮ್ಮ ಮಲತಾಯಿ–ತಂದೆಯ ಬಗ್ಗೆ ಹಝ್ರತ್ ಪೈಗಂಬರ್(ಸ) ವಿಚಾರಿಸಿದರು. ಅವರು ನಿಧನರಾಗಿದ್ದಾರೆ ಎಂದು ಆಕೆ ತಿಳಿಸಿದರು. ಅಲ್ಲಿ ಉಳಿದುಕೊಳ್ಳುವ ಅಥವಾ ಹಿಂದಿರುಗಿ ಹೋಗುವ ಆಯ್ಕೆಯನ್ನು ಹಝ್ರತ್ ಪೈಗಂಬರ್(ಸ) ಆಕೆಗೆ ನೀಡಿದರು. ಇಸ್ಲಾಮನ್ನು ಸ್ವೀಕರಿಸಿ ಹಿಂದಿರುಗಲು ಆಕೆ ನಿರ್ಧರಿಸಿದಳು. ಹಝ್ರತ್ ಪೈಗಂಬರ್(ಸ) ಆಕೆಗೆ ಮೂರು ಗುಲಾಮರು ಮತ್ತು ಒಬ್ಬ ದಾಸಿಯನ್ನು, ಹಾಗೆಯೇ ಒಂಟೆಗಳನ್ನು ನೀಡಿದರು.

ಅಬೂ ದಾವೂದ್‌ರ ಒಂದು ದುರ್ಬಲ ವರದಿಯ ಪ್ರಕಾರ, ಜಅರಾನಾ ಎಂಬ ಸ್ಥಳದಲ್ಲಿ ಹಝ್ರತ್ ಪೈಗಂಬರ್(ಸ)ರ ಮಲತಾಯಿಯೂ ಅವರನ್ನು ಭೇಟಿ ಮಾಡಲು ಬಂದಿದ್ದರು ಎಂದಿದೆ. ಆದರೆ ಅದರ ಸನದ್ (ನಿರೂಪಕರ ಸರಣಿ) ದುರ್ಬಲವಾಗಿದೆ. (ಹುಝೂರ್ ಹೇಳಿದರು:) 'ಮಲತಾಯಿಯ ಭೇಟಿಯ ಘಟನೆಯು ಬೇರೆ ಸಂದರ್ಭದ್ದಾಗಿರಬಹುದು

ಅಥವಾ ವರದಿಗಾರ ತಪ್ಪಾಗಿ ಹೇಳಿರಬಹುದು. ಏಕೆಂದರೆ ವರದಿಗಳ ಪ್ರಕಾರ ಹಝ್ರತ್ ಪೈಗಂಬರ್(ಸ)ರ ಮಲತಾಯಿ ಹುನೈನ್ ಯುದ್ಧಕ್ಕೆ ಮೊದಲೇ ನಿಧನರಾಗಿದ್ದರು.'

ಹಝ್ರತ್ ಪೈಗಂಬರ್(ಸ) ಮಕ್ಕಾದಿಂದ ಮದೀನಾಕ್ಕೆ ಹಿಜ್ರತ್ ಮಾಡಿದಾಗ, ನೂರು ಒಂಟೆಗಳ ಬಹುಮಾನದ ಆಸೆಗಾಗಿ ಸುರಾಖ ಬಿನ್ ಮಾಲಿಕ್ ಎಂಬವರು ಹಝ್ರತ್ ಪೈಗಂಬರ್(ಸ)ರನ್ನು ಬೆನ್ನಟ್ಟಿದ್ದರು. ಆಗ ಹಝ್ರತ್ ಪೈಗಂಬರ್(ಸ) ಅವರಿಗೆ ಸಂರಕ್ಷಣೆಯ ಒಂದು ಲಿಖಿತ ಪತ್ರವನ್ನು ಬರೆದು ಕೊಟ್ಟಿದ್ದರು. ಇದೇ ಸುರಾಖ, ಜಅರಾನ ಎಂಬ ಸ್ಥಳದಲ್ಲಿ ತಮ್ಮ ಆ ಪತ್ರದೊಂದಿಗೆ ಹಾಜರಾಗಿ ಇಸ್ಲಾಮನ್ನು ಸ್ವೀಕರಿಸಿದರು.

ಇದೇ ವಾಸ್ತವ್ಯದ ಅವಧಿಯಲ್ಲಿ, ಹಝ್ರತ್ ಪೈಗಂಬರ್(ಸ) ಒಂದು ರಾತ್ರಿ ಉಮ್ರಾದ ಉದ್ದೇಶದಿಂದ ಮಕ್ಕಾಗೆ ತೆರಳಿದರು ಮತ್ತು ರಾತ್ರಿ ಸಮಯದಲ್ಲಿಯೇ ಹಿಂತಿರುಗಿದರು. ಇದರಿಂದ ಹಝ್ರತ್ ಪೈಗಂಬರ್(ಸ) ಎಲ್ಲಿಗೂ ಹೋಗಿಲ್ಲವೆಂದು ಜನರು ಭಾವಿಸಿದರು. ಝುಲ್‌ಖಅದ್ ತಿಂಗಳ ಹನ್ನೆರಡು ದಿನಗಳು ಇನ್ನೂ ಬಾಕಿ ಇರುವಾಗ, ಹಝ್ರತ್ ಪೈಗಂಬರ್(ಸ) ಮದೀನಾಕ್ಕೆ ಹಿಂದಿರುಗಲು ಪ್ರಯಾಣವನ್ನು ಆರಂಭಿಸಿ, ಒಂಭತ್ತು ದಿನಗಳ ಪ್ರಯಾಣದ ನಂತರ ಮದೀನಾಕ್ಕೆ ತಲುಪಿದರು. (ಒರಿಯನ್ಟಲಿಸ್ಟರ ಕೆಲವು ಅಸಂಬದ್ಧ ಆಕ್ಷೇಪಣೆಗಳು ಮತ್ತು ಅವುಗಳ ಸಂಕ್ಷಿಪ್ತ ಉತ್ತರಗಳನ್ನು ಪ್ರಸ್ತುತಪಡಿಸುತ್ತಾ ಹುಝೂರ್ ಹೇಳಿದರು:) 'ಇವೆಲ್ಲವನ್ನೂ ಹಿಂದೆಯೂ ವಿವರಿಸಲಾಗಿದೆ. ಇವುಗಳಾಗಿದ್ದುವು ಹುನೈನ್ ಯುದ್ಧದ ನಂತರ ಘಟನೆಗಳು. ಇತರ ಕಾರ್ಯಾಚರಣೆಗಳ ಕುರಿತು ಮುಂದಿನ ಬಾರಿ ವಿವರಿಸಲಾಗುವುದು. ಇನ್‌ಶಾ ಅಲ್ಲಾಹ್.

(ಕೊನೆಯಲ್ಲಿ ಹುಝೂರ್, ಇಬ್ಬರು ದಿವಂಗತರ ಕುರಿತು ಪ್ರಸ್ತಾಪಿಸಿದರು ಮತ್ತು ಜನಾಝ ಗ್ವಾಯಿಬ್ ನಮಾಝ್ ನಿರ್ವಹಿಸುವುದಾಗಿ ಹೇಳಿದರು.)

ಮೊದಲನೆಯದಾಗಿ, ಕೆನಡದ ದಿವಂಗತ ಡಾಕ್ಟರ್ ಲಯೀಕ್ ಅಹ್ಮದ್ ಫರುಖ್ ಸಾಹಿಬ್‌ರದ್ದಾಗಿದೆ. ದಿವಂಗತರು ಹಲವು ವರ್ಷಗಳ ಕಾಲ ಆಫ್ರಿಕಾದಲ್ಲಿ ವಖ್ಫೇ ಜಿಂದಗಿಯಾಗಿ ವೈದ್ಯಕೀಯ ಸೇವೆ ಸಲ್ಲಿಸಿದರು. ಬಹಳ ಸಮರ್ಪಣಾ ಮನೋಭಾವದಿಂದ ಅವರು ಸೇವೆ ಸಲ್ಲಿಸಿದ್ದರು. ದಿವಂಗತರು ಶಾಂತ ಸ್ವಭಾವದವರೂ ದುಆ ಮಾಡುವವರೂ ಆಗಿದ್ದರು. ಅವರು ವಿನಯ, ತಾಳ್ಮೆ ಮತ್ತು ಸ್ಥಿರಚಿತ್ತತೆಗೆ ಉದಾಹರಣೆಯಾಗಿದ್ದರು. ಮಾನವೀಯತೆಯ ಸೇವೆಯಲ್ಲಿ ಅವರು ತಮ್ಮ ಇಡೀ ಜೀವನವನ್ನು ಸಾಗಿಸಿದರು. ಪ್ರತಿಕೂಲ ಪರಿಸ್ಥಿತಿಗಳಲ್ಲಿಯೂ ಅವರು ದೊಡ್ಡ ಸ್ಥೈರ್ಯದಿಂದ ಕೆಲಸ ಮಾಡಿದರು. (ಹುಝೂರ್ ಹೇಳಿದರು:) ನಾನು ಘಾನಾದಲ್ಲಿದ್ದಾಗ ನಾನು ಸಹ ಅವರೊಂದಿಗೆ ಸಮಯ ಕಳೆದಿದ್ದೇನೆ. ಅವರು ಅತ್ಯಂತ ಸಾತ್ವಿಕ, ವಿನಮ್ರ ಮತ್ತು ಸೇವೆ ಮಾಡುವ ವ್ಯಕ್ತಿಯಾಗಿದ್ದರು. ವಖ್ಫೇ ಝಿಂದಗಿಯರನ್ನು ತುಂಬಾ ಗೌರವಿಸುತ್ತಿದ್ದರು. ಅತಿಥಿ ಸತ್ಕಾರದ ಗುಣ ಅವರಲ್ಲಿ ಬಹಳವಿತ್ತು. ಪತಿ ಪತ್ನಿ ಇಬ್ಬರೂ ಕೂಡ ಅತಿಥಿ ಸತ್ಕಾರ ಮಾಡುವವರಾಗಿದ್ದರು. ಕೆಲವೇ ಜನರಲ್ಲಿ ಕಂಡುಬರುವಂತಹ ಅನೇಕ ಗುಣಗಳು ಅವರಲ್ಲಿದ್ದುವು.

ಎರಡನೆಯದ್ದು ಭಾರತದ ಹೈದರಾಬಾದಿನ ದಿವಂಗತ ಹಮೀದ್ ಅಹ್ಮದ್ ಘೋರಿ ಸಾಹಿಬ್‌ರದ್ದಾಗಿದೆ. ಅವರು ಮೂಸಿಯಾಗಿದ್ದರು. ಅವರು ಪತ್ನಿ, ಒಬ್ಬಳು ಪುತ್ರಿ, ನಾಲ್ವರು ಪುತ್ರರು ಮತ್ತು ಮೊಮ್ಮಕ್ಕಳನ್ನು ಅಗಲಿದ್ದಾರೆ. ಎಲ್ಲ ಮಕ್ಕಳು ಒಂದಲ್ಲ ಒಂದು ರೀತಿಯಲ್ಲಿ ಜಮಾಅತಿನ ಸೇವೆ ಸಲ್ಲಿಸುವ ಸೌಭಾಗ್ಯ ಪಡೆಯುತ್ತಿದ್ದಾರೆ. ದಿವಂಗತರು ಖಾದಿಯಾನ್‌ನ ನಾಝಿರ್ ಆಲ್‌ಲಾ ಸನ್ಮಾನ್ಯ ಮುಹಮ್ಮದ್ ಇನಾಮ್ ಘೋರಿ ಸಾಹಿಬ್‌ರ ಕಿರಿಯ ಸಹೋದರರಾಗಿದ್ದರು. ಅಲ್ಬಾನಿಯಾದ ಮುಬಲ್ಲಿಗ್ ಮತ್ತು ಸದರ್ ಆಗಿರುವ ಸಮದ್ ಘೋರಿ ಸಾಹಿಬ್‌ರ ತಂದೆಯಾಗಿದ್ದರು. ಉಪವಾಸ ಮತ್ತು ನಮಾಝ್ ನಿರ್ವಹಿಸುವವರೂ ತಹಜ್ಜುದ್ ನಮಾಝ್ ನಿರ್ವಹಿಸುವವರೂ ಪವಿತ್ರ ಖುರ್‌ಆನಿನೊಂದಿಗೆ ಅಪಾರ ಪ್ರೀತಿ ಹೊಂದಿದವರೂ ಸಾತ್ವಿಕರೂ ಆಗಿದ್ದ ಹಿರಿಯರಾಗಿದ್ದರು.

ದಿವಂಗತರಿಗೆ ಹಜ್ ಮತ್ತು ಉಮ್ರಾ ಮಾಡುವ ಭಾಗ್ಯ ಕೂಡ ಲಭಿಸಿತ್ತು. ಖಿಲಾಫತಿನ ಆದೇಶಗಳನ್ನು ಪಾಲಿಸುತ್ತಿದ್ದರು. ಪ್ರತಿ ಚಿಕ್ಕದಾದ ಅಥವಾ ದೊಡ್ಡದಾದ ಆದೇಶವನ್ನು ಕೂಡ ಮೊದಲು ಸ್ವತಃ ಅನುಷ್ಠಾನಕ್ಕೆ ತರಲು ಪ್ರಯತ್ನಿಸುತ್ತಿದ್ದರು, ಅನಂತರ ಜಮಾಅತಿಗೆ ತಿಳಿಸುತ್ತಿದ್ದರು. ಅಲ್ಲಾಹನ ಕೃಪೆಯಿಂದ ಅದರಲ್ಲಿ ಅವರು ಯಶಸ್ವಿಯೂ ಆಗುತ್ತಿದ್ದರು. ಅವರು ಹೋಮಿಯೋಪತಿ ಚಿಕಿತ್ಸೆಯನ್ನು ಕೂಡ ಮಾಡುತ್ತಿದ್ದರು; ಮನೆಯಲ್ಲಿ ಔಷಧಿಗಳ ಸಂಗ್ರಹವನ್ನು ಇಟ್ಟುಕೊಂಡಿದ್ದರು, ಅವುಗಳನ್ನು ರೋಗಿಗಳಿಗೆ ಉಚಿತವಾಗಿ ನೀಡುತ್ತಿದ್ದರು. ಅವರು ಆರ್ಥಿಕ ತ್ಯಾಗದಲ್ಲಿ ಮುಂಚೂಣಿಯಲ್ಲಿದ್ದರು. ಅವರು ಉತ್ತಮವಾಗಿ ಸಂಬಂಧಗಳನ್ನು ಬೆಳೆಸುವವರು ಆಗಿದ್ದರು ಮತ್ತು ಪದೇ ಪದೇ ತಮ್ಮ ಸಂಬಂಧಿಕರನ್ನು ಮನೆಯಲ್ಲಿ ಒಟ್ಟುಗೂಡಿಸಿ ಅವರ ಸುಖ – ದುಃಖಗಳಲ್ಲಿ ಭಾಗಿಯಾಗುತ್ತಿದ್ದರು.

ಅವರು ಕೇಂದ್ರ ಪ್ರತಿನಿಧಿಗಳು ಮತ್ತು ಮುಬಲ್ಲಿಗರನ್ನು ತುಂಬಾ ಗೌರವಿಸುವವರಾಗಿದ್ದರು. ಅವರು ಹೈದರಾಬಾದಿನ ನಾಯಿಬ್ ಅಮೀರ್ ಮತ್ತು ಸೆಕ್ರಟರಿ ತಅ್‌ಲೀಮುಲ್ ಖುರ್‌ಆನ್ ಆಗಿಯೂ, ತಮ್ಮ ಪ್ರಾದೇಶಿಕ ಜಮಾಅತಿನ ಸದರ್ ಆಗಿಯೂ, ನಾಝಿಮ್ ಅನ್ಸಾರುಲ್ಲಾಹ್ ಆಗಿಯೂ ಮತ್ತು ದಕ್ಷಿಣ ಭಾರತದ ಮಜ್ಲಿಸ್ ಅನ್ಸಾರುಲ್ಲಾಹ್ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದರು. ಅವರ ಜಮಾಅತ್ ಸೇವೆಗಳು ಸಾಕಷ್ಟಿವೆ. ಅವರು ಒಮ್ಮೆ ಇಲ್ಲಿನ ಜಲ್ಸದಲ್ಲಿಯೂ ಭಾಗವಹಿಸಿದ್ದರು. ಅಲ್ಲಾಹನು ಅವರೊಂದಿಗೆ ಮಗ್ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪುತ್ರ ಅಲ್ಬಾನಿಯಾದಲ್ಲಿ ಮುಬಲ್ಲಿಗ್ ಆಗಿರುವ ಕಾರಣ, ಜನಾಝದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಅಲ್ಲಾಹನು ಅವರಿಗೂ ತಾಳ್ಮೆ ಮತ್ತು ಧೈರ್ಯವನ್ನು ನೀಡಲಿ. ಜುಮಾದ ನಂತರ ನಾನು ಅವರ ಜನಾಝ ನಮಾಝನ್ನು ನಿರ್ವಹಿಸುವೆನು. (ಹುಝೂರ್ ದಿವಂಗತರ ಮಗ್ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ದುಆ ಮಾಡಿದರು.)

————————————*****————————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

At, ***'Masjid Mubarak',*** *Islamabad, Tilford,* U.K. On 03-10-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon